## ಬಾತ್ರಾಸ್ ಕೇಶ ಉತ್ಪನ್ನ

ಬೊಕ್ಕತಲೆ, ಕೂದಲು ಬೆಳ್ಳಗಾಗುವುದನ್ನು ತಡೆಗಟ್ಟಲು ಮತ್ತು ಕೂದಲು ಸೊಂಪಾಗಿ ಬೆಳೆಯುವುದಕ್ಕಾಗಿ ಡಾ. ಬಾತ್ರಾಸ್ ಕ್ಲಿನಿಕ್ ಇದೀಗ ಹೊಸ ಬಗೆಯ ಇನಸ್ಟಂಟ್ ಹೇರ್ ಉತ್ಪನ್ನವೊಂದನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ತಲೆಕೂದಲು ನಷ್ಟವಾಗುವುದನ್ನು ತಡೆಗಟ್ಟಿ ವ್ಯಕ್ತಿಯಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ನೆರವಾಗುತ್ತದೆ ಎನ್ನುತ್ತದೆ ಕಂಪೆನಿ. ಇದು ಹೋಮಿಯೊಪತಿ ಉತ್ಪನ್ನವಾಗಿದ್ದು, ಬೆಲೆ 1200 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.

ಮಾಹಿತಿಗೆ: 022-3367 1200







## ಹೊಸ ನಿಕಾನ್ ಕ್ಯಾಮೆರಾ

ನಿಕಾನ್ ಇಂಡಿಯಾ, ಹೊಸ ಡಿ 810, ಎಫ್‌ಎಕ್ಸ್ (ಫುಲ್-ಫ್ರೇಮ್) ಡಿಜಿಟಲ್ ಎಸ್‌ಎಲ್‌ಆರ್ ಕ್ಯಾಮೆರಾವನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಇದರಲ್ಲಿ ಉತ್ತಮ ಗುಣಮಟ್ಟದ ಎಚ್‌ಡಿ ವೀಡಿಯೊ ರೆಕಾರ್ಡ್ ಮಾಡಬಹುದು. 36.3 ಮೆಗಾಫಿಕ್ಸಲ್ ಸೆನ್ಸಾರ್ ಮತ್ತು ವೈಡ್ ಐಎಸ್‌ಒ ಸರಣಿ ಒಟ್ಟಾಗಿ ಉತ್ಕೃಷ್ಟ ಛಾಯಾಗ್ರಹಣ ಕೊಡುತ್ತದೆ.

ಸವಾಲಿನ ವಾತಾವರಣಗಳಲ್ಲಿ ಛಾಯಾಗ್ರಹಣವನ್ನು ಸುಲಭವಾಗಿಸುತ್ತದೆ ಎನ್ನುತ್ತದೆ ಕಂಪೆನಿ.

## ಮಿಲಾಗ್ರೋ ವಿಂಡೊ ಕ್ಲೀನಿಂಗ್ ರೋಬಾಟ್

ಗೃಹೋಪಯೋಗಿ ವಸ್ತುಗಳಿಗೆ ಹೆಸರಾದ ಮಿಲಾಗ್ರೋ ಇದೀಗ ಕಿಟಕಿಗಳನ್ನು ಸ್ವಚ್ಛಗೊಳಿಸುವ ರೋಬಾಟ್ ಒಂದನ್ನು ಮಾರುಲಟ್ಟೆಗೆ ತಂದಿದೆ. ಇದು ಮನೆಯ ಕಿಟಕಿ, ಬಾಗಿಲು, ಗಾಜುಗಳನ್ನು ಸುಲಭವಾಗಿ ಸ್ವಚ್ಛಗೊಳಿಸುತ್ತದೆ. ಬೆಲೆ 39,990 ರೂಪಾಯಿ.

ವಿವರಕ್ಕೆ: 92898 97231





## ಫೋರ್‌ಸೆವೆನ್ ಚಿಟ್ಟೆ ಆಭರಣ

ಫೋರ್ ಸೆವೆನ್ ಆನಲೈನ್ ಕಂಪೆನಿ ಚಿಟ್ಟೆ ಆಕಾರದ ವಿವಿಧ ಬಗೆಯ ಆಭರಣಗಳನ್ನು ಹೊರತಂದಿದೆ. ಬಟರ್‌ಫ್ಲೈ ಚಾರ್ಮ್, ಡ್ರಾಗನ್‌ಫ್ಲೈ ಚಾರ್ಮ್, ಕೋಕೊನಟ್ ಚಾರ್ಮ್, ಲೋಟಸ್ ಚಾರ್ಮ್ ಹೆಸರಿನಲ್ಲಿರುವ ಈ ಆಭರಣಗಳು ಟ್ರೆಂಡಿ ಹಾಗೂ ಮಾಡರ್ನ್ ಲುಕ್ ಕೊಡುತ್ತವೆ ಎನ್ನುತ್ತದೆ ಕಂಪೆನಿ. ಪೆಂಡೆಂಟ್, ಕಿವಿಯೋಲೆ ಸೊಗಸಾಗಿದೆ. ಆನ್‌ಲೈನ್ ಮೂಲಕ ಖರೀದಿಸಬಹುದು. ಮಾಹಿತಿಗೆ 9873108776 ಮತ್ತು www.fourseven.in

## ಫಾರ್ಚೂನ್ ಸೋಯಾ ಚಂಕ್ಸ್

ಅದಾನಿ ವಿಲ್‌ಮರ್ ಖಾದ್ಯ ತೈಲ ತಯಾರಿಕಾ ಕಂಪೆನಿ ಇದೀಗ ಫಾರ್ಚೂನ್ ಸೋಯಾ ಚಂಕ್ಸ್ ಎಂಬ ಆಹಾರ ಉತ್ಪನ್ನವನ್ನು ಬಿಡುಗಡೆ ಮಾಡಿದೆ. ಈ ಆಹಾರ ಜೀವಸತ್ವ, ಖನಿಜಾಂಶ ಹೀಗೆ ದೇಹಕ್ಕೆ ಅಗತ್ಯವಿರುವ ಅಮೈನೊ ಆಮ್ಲಗಳಿಂದ ಕೂಡಿದೆ ಎನ್ನುತ್ತದೆ ಕಂಪೆನಿ. ಬೆಲೆ 50 ಗ್ರಾಂಗೆ 10 ರೂಪಾಯಿ, 200 ಗ್ರಾಂಗೆ 35 ರೂಪಾಯಿ.

ವಿವರಕ್ಕೆ: 9742458630

